ಸಂಯುಕ್ತ ಕರ್ನಾಟಕ
ವಿದ್ಯಾರ್ಥಿ ಸಂಚಿಕೆ
ಕೇವಲ 1 ರೂ.ಗೆ
ಮಾಹಿತಿಗಳ ರಸದೌತಣ
ಜಾಣರ ಗುರು
ರಾಜ್ಯದ ಯಾವುದೇ ಭಾಗದಲ್ಲಿ ಪ್ರತಿಗಳು ಬೇಕಿದ್ದರೆ ಸಂಪರ್ಕಿಸಿ
ಶಾಮರಾವ ಕುಲಕರ್ಣಿ 76250 66319
ರಾಮಚಂದ್ರ 8762724389
ಹದಿಹರೆಯದವರಿಗೆ ಅರಿವಿನ ಹರಿವು

ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ-ಬೆಂಗಳೂರು
ನಿಮ್ಮೂರಲ್ಲಿ - ನಮ್ಮವರು
ನಮ್ಮ ಪ್ರಕಟಣೆಗಳಾದ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ, 'ಕರ್ಮವೀರ' ವಾರಪತ್ರಿಕೆ ಹಾಗೂ 'ಕಸ್ತೂರಿ' ಮಾಸ ಪತ್ರಿಕೆ ಬೇಕಾದಲ್ಲಿ ಹಾಗೂ ಚಂದಾದಾರಾಗಲು ದಯವಿಟ್ಟು ಈ ಕೆಳಗಿನ ಪ್ರತಿನಿಧಿಗಳನ್ನು ಸಂಪರ್ಕಿಸಿ.
ಪ್ರಸಾರಾಂಗ
ಎನ್. ಆರ್. ರಾಮಚಂದ್ರ 87627 24389
ಬಿ.ಬಿ. ಬೆಟಗೇರಿ 90084 11269
ಪ್ರಸಾರಾಂಗ ವಿಭಾಗ, ಹುಬ್ಬಳ್ಳಿ 0836/2364305
ಹಿರಿಯ ಪ್ರಸಾರಾಂಗ ವ್ಯವಸ್ಥಾಪಕರು 76250 66319
ಜಾಹೀರಾತುಗಳಿಗಾಗಿ
ರಾಜು ಬಾಳೆಕುಂದ್ರಿ 99020 08445
ಸುದ್ದಿಗಳಿಗಾಗಿ
ವಿಲಾಸ ಜೋಶಿ 89044 36953
ಸಂಜೀವ ಕಾಂಬಳೆ (ಚಿಕ್ಕೋಡಿ) 99024 27924

ನದಿಗಳ ನೀರಿನ ಮಟ್ಟ ಇಳಿಕೆ

ಯಕ್ಸಂಬಾ : ಮಹಾರಾಷ್ಟ್ರದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು ಗಡಿಭಾಗದ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನ ನದಿಗಳಲ್ಲಿ ನೀರಿನ ಮಟ್ಟ 3 ಅಡಿ ಇಳಿಕೆಯಿಂದಾಗಿ ಇಂದು ಕಲ್ಲೋಳ-ಯಡೂರ ಬ್ಯಾರೇಜ್ ಸಂಚಾರಕ್ಕೆ ಮುಕ್ತಗೊಂಡಿದೆ.

ನದಿಗೆ ಹರಿದುಬರುವ ಒಳಹರಿವಿನಲ್ಲಿ ಇಳಿಮುಖಗೊಂಡಿದ್ದು ನಿನ್ನೆಗಿಂತ ಇಂದು ಕಲ್ಲೋಳ ಬ್ಯಾರೇಜ್‌ಗೆ ಹರಿದುಬರುವ ನೀರಿನ ಪ್ರಮಾಣದಲ್ಲಿ 14,000 ಕ್ಯೂಸೆಕ್ ಕಡಿಮೆಯಾಗಿದ್ದರಿಂದ ಇಂದು ಕೃಷ್ಣಾ ನದಿಯ ಕಲ್ಲೋಳ-ಯಡೂರ ಸಂಚಾರಕ್ಕೆ ಮುಕ್ತಗೊಂಡಿವೆ.

ಇಂದು ಸುಳಕೂಡ ಬ್ಯಾರೇಜ್ ಮುಖಾಂತರ ದೂಧಗಂಗಾ ನದಿಗೆ 7,744 ಕ್ಯೂಸೆಕ್ ಮತ್ತು ಕೃಷ್ಣಾ ನದಿಗೆ ರಾಜಾಪುರ ಬ್ಯಾರೇಜ್ ಮುಖಾಂತರ 52,500 ಕ್ಯೂಸೆಕ್ ಹೀಗೆ ಒಟ್ಟು ರಾಜ್ಯಕ್ಕೆ 60,244 ಕ್ಯೂಸೆಕ್ ನೀರು ರಾಜ್ಯಕ್ಕೆ ಹರಿದು ಬರುತ್ತಿದೆ. ನಿನ್ನೆಯಷ್ಟೆ 4 ಬ್ಯಾರೇಜ್‌ಗಳು ಸಂಚಾರಕ್ಕೆ ಮುಕ್ತಗೊಂಡಿದ್ದವು. ಇಂದು 1 ಬ್ಯಾರೇಜ್ ಸಂಚಾರಕ್ಕೆ ಮುಕ್ತಗೊಂಡಿದೆ. ಇನ್ನೂ ಕೃಷ್ಣಾ ನದಿಯ ಮಾಂಜರಿ-ಸವದತ್ತಿ ಬ್ಯಾರೇಜ್ ಜಲಾವೃತ ಸ್ಥಿತಿಯಲ್ಲಿದೆ. ಒಟ್ಟು ಗಡಿಭಾಗದ 8 ಬ್ಯಾರೇಜ್‌ಗಳಲ್ಲಿ 7 ಬ್ಯಾರೇಜ್‌ಗಳು ಸಂಚಾರಕ್ಕೆ ಮುಕ್ತಗೊಂಡಿದೆ.

ನೈರುತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ.: ಎಸ್‌ಜಿ-ಎಸ್‌ಡಬ್ಲ್ಯೂಆರ್-ಪ್ರಾಜೆಯುಬಿಎಲ್-ಕವಚ-ಆರ್‌ಎಂ2 ದಿನಾಂಕ:05.08.2026
ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ನಮೂದಿಸಿರುವ ಕಾಮಗಾರಿಗೆ ಇ-ಟೆಂಡರ್ ಆಹ್ವಾನಿಸಿರುತ್ತಾರೆ
ಕಾಮಗಾರಿ ವಿವರ | ಅಂದಾಜು ವೆಚ್ಚ
ಹುಬ್ಬಳ್ಳಿ-ಅರಸೀಕೆರೆ ವಿಭಾಗದಲ್ಲಿ ಕವಚ ಸಲಕರಣೆಗಳ ರಿಲೇ ಕೊಠಡಿ ಮಾರ್ಪಾಡುಗಳು / ವಿಸ್ತರಣೆಗಳು ಅಥವಾ ಹೊಸ ನಿರ್ಮಾಣಕ್ಕಾಗಿ ಪ್ರಸ್ತಾವಿತ ಕಾಮಗಾರಿ. | Rs. 2,45,23,150.76
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.09.2026 ಸಮಯ: 11:30 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಪ್ರಾಜೆಕ್ಟ್/ಹುಬ್ಬಳ್ಳಿ
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ
South Western Railway - SWR | SWRRLY | SWRAILWAYHQ | sw_railways

CHANGE OF NAME
I, DIWANASAHEB S/o. RAJESAHEB MOOLIMANI R/o. Manihal (Sureban), Tal Ramdurg Dist: Belgavi. I have changed my name as DIWANSAB S/o. RAJESAB MOOLIMANI vide affidavit sworn before J. R. Gangannavar Notary Ramdurg, Dist Belagavi. dtd 10-8-2026

ಬರ ಘೋಷಿಸಿ ಲಾವಣಿ ರೈತರಿಗೂ ಪರಿಹಾರ ಕೊಡಿ | ಸರ್ಕಾರಕ್ಕೆ ಬಿಜೆಪಿ ಬರ ಅಧ್ಯಯನ ತಂಡದ ರವಿಕುಮಾರ ಒತ್ತಾಯ

ಎಕರೆಗೆ 50 ಸಾವಿರ ಪರಿಹಾರಕ್ಕೆ ಪಟ್ಟು

ಸಂ.ಕ. ಸಮಾಚಾರ, ಬೆಳಗಾವಿ

ಭೂಮಿ ಬೇರೆಯವರದು. ಬಿತ್ತನೆ, ಬೀಜ, ಗೊಬ್ಬರ, ಕೂಲಿ, ಸಾಲ ಎಲ್ಲವೂ ಲಾವಣಿ ರೈತನದು. ಮಳೆ ಕೈಕೊಟ್ಟರೆ ನಷ್ಟವೂ ಅವನದೇ. ಆದ್ದರಿಂದ ಲಾವಣಿಗೆ ಜಮೀನು ಪಡೆದು ಕೃಷಿ ಮಾಡುವ ರೈತರನ್ನೂ ಪರಿಹಾರದ ಹಕ್ಕುದಾರರನ್ನಾಗಿ ಗುರುತಿಸಲು ಸರ್ಕಾರ ಪ್ರತ್ಯೇಕ ನೀತಿ ರೂಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಆಗ್ರಹಿಸಿದರು.

ನಗರದಲ್ಲಿಸೋಮವಾರಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಬರ ಅಧ್ಯಯನ ತಂಡವು ಬೆಳಗಾವಿ ಜಿಲ್ಲೆಯ ಯರಗಟ್ಟಿ, ರಾಮದುರ್ಗ, ಸವದತ್ತಿ ಭಾಗದ ಹೊಲಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಮಳೆ ಕೊರತೆಯಿಂದ ಹೆಸರು, ಶೇಂಗಾ, ಮೆಕ್ಕೆಜೋಳ, ಹತ್ತಿ, ಸೂರ್ಯಕಾಂತಿ ಹಾಗೂ ಕಬ್ಬು ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ತೀವ್ರ ಹಾನಿಗೀಡಾಗಿರುವುದು ಕಂಡುಬಂದಿದೆ ಎಂದರು.

ಸವದತ್ತಿ ತಾಲ್ಲೂಕಿನಲ್ಲಿ ಮಲ್ಲಪ್ಪ ಎಂಬ ರೈತ ಏಳು ಎಕರೆ ಜಮೀನನ್ನು ಎಕರೆಗೆ 10 ಸಾವಿರದಂತೆ ಲಾವಣಿಗೆ ಪಡೆದಿದ್ದಾರೆ.

ಬೆಳಗಾವಿಯಲ್ಲಿ ಸೋಮವಾರ ವಿಧಾನ ಪರಿಷತ್ ಸದಸ್ಯ ರವಿಕುಮಾರ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಹಾನಿಗೊಳಗಾಗ ಬೆಳೆ ಪ್ರದರ್ಶಿಸಿದರು. ಶಾಸಕ ಅಭಯ ಪಾಟೀಲ, ಅನಿಲ ಬೆನಕೆ, ಸುಭಾಸ ಪಾಟೀಲ ಮುಂತಾದವರು ಹಾಜರಿದ್ದರು.

ಭೂಮಾಲಿಕನಿಗೆ ಕೊಡಬೇಕಾದ 70 ಸಾವಿರದ ಜತೆಗೆ ಬೀಜ, ಗೊಬ್ಬರ, ಕೂಲಿ ಮತ್ತಿತರ ವೆಚ್ಚ ಸೇರಿ ಸುಮಾರು 2 ಲಕ್ಷ ಬಂಡವಾಳ ಹಾಕಿದ್ದಾರೆ. ಆದರೆ ಸೂರ್ಯಕಾಂತಿ ಕೈಕೊಟ್ಟಿದೆ. 'ಬೆಳೆ ಬರಲಿ, ಬರದಿರಲಿ ಲಾವಣಿ ಹಣ ಕೊಡಲೇಬೇಕು. ಬೆಳೆ ಹಾಳಾದ ನಷ್ಟ ರೈತನದು. ಸರ್ಕಾರ ಪರಿಹಾರ ನೀಡಿದರೆ ದಾಖಲೆ ಪ್ರಕಾರ ಅದು ಜಮೀನಿನ ಮಾಲಿಕನಿಗೆ ಹೋಗುತ್ತದೆ. ಹಾಗಾದರೆ ಬೆಳೆ ಬೆಳೆದವನು ಎಲ್ಲಿಗೆ ಹೋಗಬೇಕು?' ಎಂದು ಪ್ರಶ್ನಿಸಿದರು.

ಜಿಲ್ಲೆಯಲ್ಲಿ ಲಾವಣಿ ಪದ್ಧತಿಯಲ್ಲಿ ಕೃಷಿ ಮಾಡುವರೈತರಸಂಖ್ಯೆಗಮನಾರ್ಹವಾಗಿದ್ದು, ತಮ್ಮ ಅಂದಾಜಿನ ಪ್ರಕಾರ ಶೇ.25ರಷ್ಟು ರೈತರು ಈ ವರ್ಗದಲ್ಲಿದ್ದಾರೆ. ಬೆಳೆ ಸಮೀಕ್ಷೆಯಲ್ಲಿಯೇ ನೈಜ ಸಾಗುವಳಿದಾರನ ವಿವರ ದಾಖಲಿಸಿ, ಪರಿಹಾರದಲ್ಲಿ ಅವನಿಗೂ ಪಾಲು ಸಿಗುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ಮಳೆಗಾಗಿ ಕಾದು ಕೆಲವು ರೈತರು ಎರಡು-ಮೂರು ಬಾರಿ ಬಿತ್ತನೆ ಮಾಡಿದ್ದಾರೆ. ಪ್ರತಿ ಬಿತ್ತನೆಗೂ ಬೀಜ, ಗೊಬ್ಬರ, ಕೂಲಿ, ಎತ್ತು ಅಥವಾ ಟ್ರ್ಯಾಕ್ಟರ್ ವೆಚ್ಚ ಮಾಡಿದ್ದಾರೆ. ಸಾಲದ ಮೇಲಿನ ಬಡ್ಡಿಯ ಹೊರೆ ಬೇರೆ. ಇಷ್ಟೆಲ್ಲ ಹಣ ಸುರಿಸಿದ ಬಳಿಕವೂ ಬೆಳೆ ಕೈಗೆ ಸಿಗದ ಸ್ಥಿತಿ ನಿರ್ಮಾಣವಾಗಿದೆ ಎಂದು ರವಿಕುಮಾರ್ ಹೇಳಿದರು.

ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿ ಎಕರೆಗೆ 50 ಸಾವಿರ ಪರಿಹಾರ ನೀಡಬೇಕು. ಮುಂದಿನ ಬಿತ್ತನೆಗೆ ರೈತನ ಕೈಯಲ್ಲಿ ಹಣ ಉಳಿಯಬೇಕಾದರೆ ಮೊದಲ ಕಂತಾಗಿ ಕನಿಷ್ಠ 25 ಸಾವಿರವನ್ನು ತಕ್ಷಣ ಖಾತೆಗೆ ಹಾಕಬೇಕು. ಜೊತೆಗೆ ಬೆಳೆಸಾಲ ಮನ್ನಾ ಮಾಡಬೇಕು' ಎಂದು ಆಗ್ರಹಿಸಿದರು.

ಯರಗಟ್ಟಿ ತಾಲ್ಲೂಕಿನ ಸೊಪ್ಪಡ್ಲದಲ್ಲಿ ಹೆಸರು ಬೆಳೆ ಪರಿಶೀಲಿಸಿದ್ದು, ಸಾಮಾನ್ಯವಾಗಿ 8 ರಿಂದ 12 ಕ್ವಿಂಟಲ್ ಇಳುವರಿ ಬರುತ್ತಿದ್ದ ಜಮೀನಿನಲ್ಲಿ ಈ ಬಾರಿ ಕಾಳೇ ಕಟ್ಟಿಲ್ಲ. ಕಾಯಿ ಇದ್ದರೂ ಕಾಳು ಸಾಸಿವೆ ಗಾತ್ರದಲ್ಲಿದೆ ಎಂದು ವಿವರಿಸಿದರು.

'ಒಂದೇ ಹೋಬಳಿಯ ಒಂದು ಗ್ರಾಮದಲ್ಲಿ ಮಳೆಯಾದರೆ ಪಕ್ಕದ ಗ್ರಾಮಕ್ಕೂ ಮಳೆಯಾಗಿದೆ ಎಂದು ಸರಾಸರಿ ಲೆಕ್ಕ ಹಾಕುವುದು ಸರಿಯಲ್ಲ. ಎರಡರಿಂದ ನಾಲ್ಕು ಕಿಲೋಮೀಟರ್ ಅಂತರದಲ್ಲೇ ಮಳೆಯ ಚಿತ್ರ ಬದಲಾಗುತ್ತಿದೆ. ಒಂದು ಕಡೆ ಹೊಲ ಹಸಿರಾಗಿದ್ದರೆ ಮತ್ತೊಂದು ಕಡೆ ಬೆಳೆ ಒಣಗಿರಬಹುದು. ಇಂತಹ ಪರಿಸ್ಥಿತಿಯಲ್ಲಿ ಹೋಬಳಿ ಸರಾಸರಿ ರೈತನ ನಷ್ಟ ಮುಚ್ಚಿಹಾಕುತ್ತದೆ' ಎಂದರು.

ಶಾಸಕರಾದ ಅಭಯ ಪಾಟೀಲ, ವಿಠಲ ಹಲಗೇಕರ, ಮಾಜಿ ಶಾಸಕರಾದ ಅನಿಲ ಬೆನಕೆ, ಸಂಜಯ ಪಾಟೀಲ, ಮುಖಂಡರಾದ ಮುರುಘೇಂದ್ರಗೌಡ ಪಾಟೀಲ, ಮಾದಮ್ಮನ್ನವರ, ಧನಶ್ರೀ ದೇಸಾಯಿ, ರಾಜಶೇಖರ ಡೋಣಿ ಮತ್ತು ಜಗದೀಶ್ ಬೂದಿಹಾಳ, ಸಂತೋಷ ದೇಶನೂರ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.

> "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಬೆಳೆಹಾನಿ ಸಮೀಕ್ಷೆಯಲ್ಲಿ ಹೋಬಳಿ ಬದಲು ಗ್ರಾಮ ಪಂಚಾಯಿತಿಯನ್ನು ಮೂಲ ಘಟಕವನ್ನಾಗಿ ಪರಿಗಣಿಸಬೇಕು. ನಾಲ್ಕೈದು ಗ್ರಾಮಗಳ ಮಟ್ಟದಲ್ಲಿ ಸ್ಥಳೀಯ ಮಳೆ ಮತ್ತು ಬೆಳೆ ಸ್ಥಿತಿ ಪರಿಶೀಲಿಸಿ ವರದಿ ಸಿದ್ಧಪಡಿಸಬೇಕು.
> ■ **ಎನ್.ರವಿಕುಮಾರ,** ಪರಿಷತ್ ಸದಸ್ಯ

ಲಂಚ ಪಡೆದರೆ ಶಿಸ್ತು ಕ್ರಮ

ರಾಮದುರ್ಗ : ಸರಕಾರಿ ಸೌಲಭ್ಯ ಕಲ್ಪಸಲು ವಿಳಂಬ ಧೋರಣೆ ಅನುಸರಿಸಿ, ಲಂಚ ಪಡೆಯುವುದು ಖಚಿತವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಶಾಸಕ ಹಾಗೂ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಖಡಕ್ ಎಚ್ಚರಿಕೆ ನೀಡಿದರು.

ನಗರದ ತಾಲೂಕಾ ಆಡಳಿತ ಸೌಧದ ತಹಶೀಲ್ದಾರ ಕಾರ್ಯಾಲಯದಲ್ಲಿ ಬರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಇಲಾಖೆಯ ಪ್ರಗತಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ವಿವಿಧ ಇಲಾಖೆಗಳ ಸೌಲಭ್ಯಕ್ಕೆ ಜನತೆ ಪ್ರತಿದಿನ ಅಲೆದಾಡುವಂತಾಗಬಾರದು. ಪದೇ ಪದೇ ಜನತೆಯನ್ನು ಸತಾಯಿಸಿದಲ್ಲಿ ನಾನೇ ಖುದ್ದಾಗಿ ತಹಶೀಲ್ದಾರ ಕಾರ್ಯಾಲಯಕ್ಕೆ ಆಗಮಿಸಿ, ಪರಿಶೀಲಿಸಬೇಕಾಗುತ್ತದೆ ಎಂದು ತಾಕೀತು ಮಾಡಿದರು.

ತಾಲೂಕಿನಲ್ಲಿ ಬಿತ್ತನೆಗೆ ಮಳೆಯಾಗಿದೆ. ಬಿತ್ತನೆ ನಂತರ ವಾಡಿಕೆ ಮಳೆಯಾದರೂ ಸಹ ತೇವಾಂಶದ ಕೊರತೆಯಿಂದ ಹೆಸರು, ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳ ಇಳುವರಿ ಕಡಿಮೆಯಾಗುವ ಸಾಧ್ಯತೆ ದಟ್ಟವಾಗಿದ್ದು, ಮಳೆ ಕೊರತೆಯಿಂದ ವಿಮಾ ಕಂಪನಿಗಳಿಗೆ ಮಧ್ಯಂತರ ಪರಿಹಾರ ನೀಡುವಂತೆ ಕಂದಾಯ ಹಾಗೂ ಕೃಷಿ ಇಲಾಖೆ ಜಂಟಿ ವರದಿ ನೀಡಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀನಾಥ ಚಿಮ್ಮಲಗಿ ಮಾಹಿತಿ ನೀಡಿದರು.

ಆರ್‌ಡಬ್ಲೂಎಸ್ ಎಇಇ ಅಮರ ನಾಯಕ ಮಾತನಾಡಿ, ಮುದೇನೂರ, ಮಾರಡಗಿ ಸೇರಿದಂತೆ ವಿವಿಧೆಡೆ ಕುಡಿಯುವ ನೀರಿಗಾಗಿ ಉಂಟಾಗುವ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಶಾಸಕ ಅಶೋಕ ಪಟ್ಟಣ ಕುಡಿಯುವ ನೀರಿಗಾಗಿ ತುರ್ತು ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿಗಳು ಪ್ರತಿ ತಾಲೂಕಿಗೆ ಟಾಸ್ಕಫೋರ್ಸ ಸಮಿತಿಗೆ ರೂ.1 ಕೋಟಿ ಅನುದಾನ ಬಿಡುಗಡೆ ಮಾಡಲಿದ್ದಾರೆ. ಅಧಿಕಾರಿಗಳು ಕ್ರಿಯಾಯೋಜನೆ ಸಲ್ಲಿಸಬೇಕು ಎಂದರು.

ತಹಶೀಲ್ದಾರ ಪ್ರಕಾಶ ಗಾಯಕವಾಡ, ಹೆಸ್ಕಾಂ ಎಇಇ ಶಿವಪ್ರಕಾಶ ಕರಡಿ, ಟಿಎಚ್‌ಓ ಡಾ.ಆರ್.ಎಚ್. ಬಂತಿ, ಶಿಶು ಅಭಿವೃದ್ಧಿ ಅಧಿಕಾರಿ ಶಂಕರ ಕುಂಬಾರ, ಲೋಕೋಪಯೋಗಿ ಎಇಇ ಎನ್. ರವಿಕುಮಾರ, ಎಡಿಎಲ್‌ಆರ್ ಪ್ರಕಾಶ ಸತ್ತಿಗೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.

ತಾಲೂಕಾ ಆಡಳಿತ ಸೌಧದ ತಹಶೀಲ್ದಾರ ಕಾರ್ಯಾಲಯದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಹಾಗೂ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಮಾತನಾಡಿದರು.

ಸ್ವಾತಂತ್ರ್ಯ ಸಮರದ ಇತಿಹಾಸ ಅರಿಯಿರಿ

ಸಂಕೇಶ್ವರ: ದೇಶದ 80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಕ್ಕೆ ಪಟ್ಟಣ ಸಜ್ಜಾಗುತ್ತಿರುವ ಸಂದರ್ಭದಲ್ಲಿ 'ಹರ್ ಘರ್ ತಿರಂಗಾ' ಅಭಿಯಾನದ ಅಂಗವಾಗಿ ಬಿಜೆಪಿ ಕಾರ್ಯಕರ್ತರು ಹಾಗೂ ಯುವಜನರು ಸೋಮವಾರ ತ್ರಿವರ್ಣ ಧ್ವಜ ಹಿಡಿದು ಬೈಕ್ ರ್‍ಯಾಲಿ ನಡೆಸಿ ದೇಶಭಕ್ತಿಯ ಸಂದೇಶ ಸಾರಿದರು.

ಶಾಸಕ ನಿಖಿಲ್ ಕತ್ತಿ ನೇತೃತ್ವದಲ್ಲಿ ನಡೆದ ರ್‍ಯಾಲಿಗೆ ಗಾಂಧಿ ಚೌಕ್‌ನಲ್ಲಿ ಚಾಲನೆ ದೊರೆಯಿತು. ನೂರಾರು ಯುವಕರು ಬೈಕ್‌ಗಳಿಗೆ ತ್ರಿವರ್ಣ ಧ್ವಜ ಕಟ್ಟಿಕೊಂಡು ಉತ್ಸಾಹದಿಂದ ಪಾಲ್ಗೊಂಡರು. ಪ್ರಮುಖ ರಸ್ತೆಗಳ ಮೂಲಕ ಸಾಗಿದ ರ್‍ಯಾಲಿ ಪಟ್ಟಣದಾದ್ಯಂತ ದೇಶಭಕ್ತಿಯ ವಾತಾವರಣ ನಿರ್ಮಿಸಿತು.

ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಶಾಸಕ ನಿಖಿಲ್ ಕತ್ತಿ, ಸ್ವಾತಂತ್ರ್ಯವೆಂಬುದು ಸುಲಭವಾಗಿ ದೊರೆತಕೊಡುಗೆಯಲ್ಲ.ಅಸಂಖ್ಯಾತಹೋರಾಟಗಾರರ ತ್ಯಾಗ, ಬಲಿದಾನ ಮತ್ತು ಹೋರಾಟದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ. ಸ್ವಾತಂತ್ರ್ಯ ಹೋರಾಟದ ಇತಿಹಾಸ ಹಾಗೂ ದೇಶದ ರಕ್ಷಣೆಗೆ, ಪ್ರಗತಿಗೆ ಶ್ರಮಿಸಿದ ಮಹನೀಯರ ಕೊಡುಗೆಯನ್ನು ಯುವಪೀಳಿಗೆ ಅರಿತುಕೊಳ್ಳಬೇಕು ಎಂದರು.

ಸಂಕೇಶ್ವರದಲ್ಲಿ ಹರಘರ ತಿರಂಗಾ ಅಭಿಯಾನದ ಅಂಗವಾಗಿ ಶಾಸಕ ನಿಖಿಲ ಕತ್ತಿ ನೇತೃತ್ವದಲ್ಲಿ ಬೈಕ್ ರ್‍ಯಾಲಿ ನಡೆಯಿತು.

ಜಿಪಂ ಮಾಜಿ ಸದಸ್ಯ ಪವನ ಕತ್ತಿ ಮಾತನಾಡಿ, 'ಹರ್ ಘರ್ ತಿರಂಗಾ' ಕೇವಲ ಧ್ವಜಾರೋಹಣದ ಕಾರ್ಯಕ್ರಮವಾಗದೆ, ಪ್ರತಿಯೊಬ್ಬರ ಮನದಲ್ಲಿ ದೇಶಪ್ರೇಮದ ಭಾವನೆ ಗಟ್ಟಿಗೊಳಿಸುವ ಅಭಿಯಾನವಾಗಬೇಕು ಎಂದು ಹೇಳಿದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ಶಿವಾನಂದ ಮುಡಶಿ, ಗಜಾನನ ಕ್ವಳ್ಳಿ, ಮಹಾದೇವ ಕ್ಷೀರಸಾಗರ, ಮುಖಂಡರಾದ ಸುನೀಲ ಪರ್ವತರಾವ, ರೋಹನ ನೇಸರಿ, ಅನಿಲ ಖಾನಾಯಿ, ಅಶೋಕ ಮಸ್ತಿ, ಅಶೋಕ ಹಿರೆಕೋಡಿ, ವಿಜಯ ಶೆರೆಕರ್, ಸಾಗರ ಕ್ವಳ್ಳಿ, ಜಯಪ್ರಕಾಶ ಸಾವಂತ, ಆನಂದ ಸಂಸುದ್ಧಿ, ಚೇತನ ಬಶೆಟ್ಟಿ ಸೇರಿದಂತೆ ನಿವೃತ್ತ ಯೋಧರು, ಬಿಜೆಪಿ ಕಾರ್ಯಕರ್ತರು ಹಾಗೂ ನೂರಾರು ಯುವಕರು ಪಾಲ್ಗೊಂಡಿದ್ದರು.

ಬಸವೇಶ್ವರ ಅರ್ಬನ್ ಸೊಸೈಟಿಗೆ ಲಾಭ

ಬಸವೇಶ್ವರ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ 31ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಅಧ್ಯಕ್ಷ ಮಲ್ಲಿಕಾರ್ಜುನ ಢವಳೇಶ್ವರ ಉದ್ಘಾಟಿಸಿದರು.

ಮೂಡಲಗಿ : ಬಸವೇಶ್ವರ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ 2025-26ನೇ ಸಾಲಿನಲ್ಲಿ ಮಾರ್ಚ ಅಂತ್ಯಕ್ಕೆ 5.35 ಕೋಟಿ ರೂ. ಲಾಭಗಳಿಸುವ ಮೂಲಕ ಪ್ರಗತಿಯತ್ತ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಢವಳೇಶ್ವರ ಹೇಳಿದರು

ಸೋಮವಾರ ಪಟ್ಟಣದ ಪ್ರತಿಷ್ಠಿತ ಬಸವೇಶ್ವರ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಸಭಾ ಭವನದಲ್ಲಿ ಜರುಗಿದ 31ನೇ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೊಸೈಟಿಯು 6.90 ಕೋಟಿ ಶೇರು ಬಂಡವಾಳ, 27.21 ಕೋಟಿ ಕಾಯ್ದಿರಿಸಿದ ನಿಧಿ, 274.36 ಕೋಟಿ ಠೇವಣಿ ಹಾಗೂ 81.34 ಕೋಟ